ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.

ಪಿಡಬ್ಲ್ಯೂ:2

ಸ್ಪೆಷಲ್ ಕೇಸ್ ಸಂಖ್ಯೆ:508/23 ಸಿಡಬ್ಲ್ಯೂ:3

ಸಾಕ್ಷಿದಾರರ ಹೆಸರು : ಪಾರ್ವತಿ

ಗಂಡನ ಹೆಸರು : ಬಾಬು

ವಯಸ್ಸು : 55

ವೃತ್ತಿ : ಗೇರು ಬೀಜ ಫ್ಯಾಕ್ಟರಿಯಲ್ಲಿ ಕೆಲಸ

ವಾಸ : ಮೂಡ್ಲಕಟ್ಟೆ

ದಿನಾಂಕ: 06-03-2026 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ

ಚಾಸಾ.1 ಲಕ್ಷ್ಮೀ ನನ್ನ ಮಗಳು, ಚಾಸಾ.2 ಬಾಬು ನನ್ನ ಗಂಡ, ಚಾಸಾ.4 ಪ್ರಕಾಶ ನನ್ನ ಮಗ, ಚಾಸಾ.5 ದಿನೇಶ ನನ್ನ ಅಣ್ಣನ ಮಗ, ಚಾಸಾ.6 ರಾಮ ನನ್ನ ಅಣ್ಣನಿರುತ್ತಾನೆ. ನನ್ನ ಮಗಳು ಲಕ್ಷ್ಮೀಯನ್ನು ನಮ್ಮ ಸಂಬಂಧಿ ರಾಘವೇಂದ್ರ ಎನ್ನುವವರಿಗೆ ಸುಮಾರು 10 – 12 ವರ್ಷಗಳ ಹಿಂದೆ ಮದುವೆ ಮಾಡಿಕೊಟ್ಟಿದ್ದೆವು. ಈಗ ಸುಮಾರು 4 – 5 ವರ್ಷದ ಹಿಂದೆ ನನ್ನ ಮಗಳನ್ನು ಬಿಟ್ಟಿರುತ್ತಾನೆ. ನನ್ನ ಮಗಳಿಗೆ ಒಂದು ಹೆಣ್ಣು ಮತ್ತು ಒಂದು ಗಂಡು ಮಗು ಇರುತ್ತದೆ. ನನ್ನ ಮಗಳನ್ನು ಅವಳ ಗಂಡ ರಾಘವೇಂದ್ರ ತ್ಯಜಿಸಿದ ನಂತರ ಅವಳು ತನ್ನ ಮಕ್ಕಳೊಂದಿಗೆ ಮೂಡ್ಲಕಟ್ಟೆ ಜನತಾ ಕಾಲೋನಿಯಲ್ಲಿರುವ ನಮ್ಮ ಮನೆಗೆ ಬಂದು ವಾಸವಾಗಿರುತ್ತಾಳೆ. ನನ್ನ ಮಗಳು ಕೂಲಿ ಕೆಲಸ ಮಾಡುತ್ತಾಳೆ. ನನಗೆ ಆರೋಪಿಯ ಪರಿಚಯ ಇಲ್ಲಾ. ಆರೋಪಿ ರೋನಿ ಡಿ ಸೋಜಾ ನನ್ನ ಮಗಳ ಜೊತೆ ನಮ್ಮ ಮನೆಗೆ ಬಂದು ಆತ್ಮೀಯವಾಗಿ ಮಾತನಾಡುತ್ತಿದ್ದುದನ್ನು ನಾನು ನೋಡಿರುವುದಿಲ್ಲ. ಆರೋಪಿ ರೋನಿ ಡಿ ಸೋಜಾ ನನ್ನ ಮಗಳನ್ನು ಬಲತ್ಕಾರವಾಗಿ ಲೈಂಗಿಕವಾಗಿ ಬಳಸಿಕೊಂಡ ಬಗ್ಗೆ ಮತ್ತು ಈ ವಿಷಯ ಯಾರಿಗೂ ಹೇಳಬೇಡ ನಿನ್ನನ್ನು ಮದುವೆಯಾಗುತ್ತೇನೆ ಎಂದು ನನ್ನ

ಮಗಳನ್ನು ನಂಬಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಆ ಬಗ್ಗೆ ನನಗೆ ನನ್ನ ಮಗಳು ಏನನ್ನೂ ಹೇಳಿದ್ದು ಇಲ್ಲಾ. ಆರೋಪಿಯೊಂದಿಗೆ ನನ್ನ ಮಗಳನ್ನು ಮದುವೆ ಮಾಡುವ ಬಗ್ಗೆ ನಾನು ಯಾವತ್ತೂ ವಿಚಾರ ಮಾಡಿದ್ದು ಇಲ್ಲಾ. ಆರೋಪಿ ನನ್ನ ಮಗಳಿಗೆ ಅವಾಚ್ಯವಾಗಿ ಬೈದು ಜಾತಿ ನಿಂದನೆ ಮಾಡಿ ಜೀವ ಬೆದರಿಕೆ ಹಾಕಿದ್ದು ಮತ್ತು ಅವಳಿಗೆ ಮಾನಭಂಗ ಮಾಡಿದ ವಿಷಯ ನನಗೆ ಗೊತ್ತಿಲ್ಲ. ಮತ್ತು ಆ ಬಗ್ಗೆ ನನ್ನ ಮಗಳು ನನಗೆ ಹೇಳಿಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

**(ಸಾಕ್ಷಿಯು ಸಂಪೂರ್ಣ ಪ್ರತಿಕೂಲ ಸಾಕ್ಷಿಯಾದ ಕಾರಣ ಆತನನ್ನು ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿಯನ್ನು ಕೋರಿರುತ್ತಾರೆ. ಆ ಬಗ್ಗೆ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ**

ಆರೋಪಿ ರೋನಿ ಡಿ ಸೋಜಾ ಪರಿಚಯ ನಮಗೆ ಇದ್ದು ಅವನು ನಮ್ಮ ಮನೆಗೆ ಆಗಾಗ ಬಂದು ನನ್ನ ಮಗಳು ಮತ್ತು ನನ್ನೊಂದಿಗೆ ಆತ್ಮೀಯವಾಗಿ ಮಾತನಾಡಿಕೊಂಡು ಹೋಗುತ್ತಿದ್ದ ಎಂದರೆ ಸರಿ ಅಲ್ಲಾ. ನನ್ನ ಮಗಳು ಫಿರ್ಯಾದಿ ನೀಡುವ ಸುಮಾರು ಒಂದೂವರೆ ವರ್ಷಗಳ ಹಿಂದೆ ನಮ್ಮ ಕುಟುಂಬದವರೆಲ್ಲರೂ ನಮ್ಮ ಸಂಬಂಧಿಕರ ಮನೆಯ ಕಾರ್ಯಕ್ರಮಕ್ಕೆ ಹೋಗಿದ್ದೆವು ಲಕ್ಷ್ಮೀ ಒಬ್ಬಳೇ ಮನೆಯಲ್ಲಿದ್ದಳು, ಕಾರ್ಯಕ್ರಮ ಮುಗಿಸಿಕೊಂಡು ಮನೆಗೆ ಬಂದಾಗ ಬೇಸರದಲ್ಲಿದ್ದ ಲಕ್ಷ್ಮೀಯನ್ನು ಏನಾಯಿತು ಎಂದು ವಿಚಾರಿಸಿದಾಗ ಆರೋಪಿ ರೋನಿ ಡಿ ಸೋಜಾ ಮನೆಗೆ ಬಂದು ಮದುವೆ ಮಾಡಿಕೊಳ್ಳುತ್ತೇನೆ ಎಂದು ಹೇಳಿ ಬೇಡಾ ಬೇಡಾ ಎಂದರೂ ಕೂಡಾ ಬಲತ್ಕಾರವಾಗಿ ನನ್ನನ್ನು ಲೈಂಗಿಕವಾಗಿ ಬಳಸಿಕೊಂಡಿರುತ್ತಾನೆ ಹೆದರಿಬೇಡಾ ನಿನ್ನನ್ನು ಮದುವೆ ಮಾಡಿಕೊಳ್ಳುತ್ತೇನೆ ಈ ವಿಚಾರ ಯಾರಿಗೂ ಹೇಳಬೇಡಾ, ಹೇಳಿದರೆ ನಿನ್ನ ಮಾನ ಹರಾಜು ಮಾಡುತ್ತೇನೆ ಎಂದು ಹೇಳಿದ್ದಾಗಿ ನನಗೆ ತಿಳಿಸಿರುತ್ತಾಳೆ ಎಂದರೆ ಸರಿ ಅಲ್ಲಾ. ನಾವು ಮನೆಯವರು ಆರೋಪಿ ರೋನಿ ಡಿ ಸೋಜಾ ಮದುವೆ ಮಾಡಿಕೊಂಡು ಬಾಳಿಸುವುದಾದರೆ ನಮ್ಮದೇನು ಅಭ್ಯಂತರ ಇಲ್ಲಾ ನಾವು ಕೂಡಾ ಮಾತಾಡುತ್ತೇವೆಂದು ಸಮಾಧಾನ ಮಾಡಿದ್ದೆವು ಎಂದರೆ ಸರಿ ಅಲ್ಲಾ. ನಂತರ ಆರೋಪಿ ನಮ್ಮ ಮನೆಗೆ ಬಂದಿರುವುದಿಲ್ಲ, ಮದುವೆ ಪ್ರಸ್ತಾಪವನ್ನು ಮುಂದಕ್ಕೆ ಹಾಕುತ್ತಾ ಬಂದಿರುತ್ತಾನೆ ಎಂದರೆ ಸರಿ ಅಲ್ಲಾ.

ಸತೀಶ್ ಶೆಟ್ಟಿಯವರ ಚಟ್ಲಿ ಕೆರೆ ಹತ್ತಿರ ಮಧ್ಯಾಹ್ನ ಸುಮಾರು 1.00 ಗಂಟೆಗೆ ನನ್ನ ಮಗಳು ಆರೋಪಿಯ ಹತ್ತಿರ ನೀನು ನನಗೆ ಏಕೆ ಮೋಸ ಮಾಡಿದ್ದೀ ನನ್ನನ್ನು ಮದುವೆ ಮಾಡಿಕೊಳ್ಳಬೇಕು ಎಂದು ಕೇಳಿದ್ದಕ್ಕೆ ಆರೋಪಿ ನನ್ನ ಮಗಳಿಗೆ ಬೇವರ್ಷಿ ರಂಡೆ ಕೂಡಾಳು ಜಾತಿಯವಳು ನಿನ್ನನ್ನು ಮದುವೆಯಾಗಲು ಆಗುತ್ತದಾ ನೀನು ಇನ್ನು ಮುಂದಕ್ಕೆ ನನ್ನ ಹತ್ತಿರ ಬಂದರೆ ನಿನ್ನನ್ನು ಹಾಗೂ ನಿನ್ನ ಮಕ್ಕಳನ್ನು ಕೊಂದು ಚಟ್ಲಿಕೆರೆಗೆ ಬಿಸಾಡುತ್ತೇನೆ ಎಂದು ಬೆದರಿಸಿ ನನ್ನ ಮಗಳ ಮೊಬೈಲನ್ನು ನೆಲಕ್ಕೆ ಬಿಸಾಡಿರುತ್ತಾನೆ ಎಂದು ನನ್ನ ಮಗಳು ನನಗೆ ತಿಳಿಸಿರುತ್ತಾಳೆ ಎಂದರೆ ಸರಿ ಅಲ್ಲಾ. ಆರೋಪಿ ನನ್ನ ಮಗಳಿಂದ ಆಗಾಗ ರೂ:10,000-00, 15,000-00 ದಂತೆ ಒಟ್ಟು ರೂ:60,000-00 ತೆಗೆದುಕೊಂಡು ವಾಪಾಸು ಕೊಟ್ಟಿರುವುದಿಲ್ಲ ಎಂದು ನನ್ನ ಮಗಳು ನನ್ನ ಬಳಿ ಹೇಳಿರುತ್ತಾಳೆ ಎಂದರೆ ಸರಿ ಅಲ್ಲಾ. ನಾವು ಪರಿಶಿಷ್ಟ ಜಾತಿಗೆ ಸೇರಿದವಳು ಎಂದು ಆರೋಪಿಗೆ ಗೊತ್ತಿದ್ದರೂ ಸಹಾ ನನ್ನ ಮಗಳನ್ನು ಮದುವೆಯಾಗುವುದಾಗಿ ನಂಬಿಸಿ ಬಲತ್ಕಾರವಾಗಿ ಲೈಂಗಿಕ ಸಂಪರ್ಕ ಮಾಡಿ ಮದುವೆಯಾಗದೇ ಮೋಸ ಮಾಡಿ ಅವಳಿಗೆ ಅವಾಚ್ಯವಾಗಿ ಬೈದು ಜಾತಿ ನಿಂದನೆ ಮಾಡಿರುತ್ತಾನೆ ಎಂದು ದಿನಾಂಕ:02-07-2023 ರಂದು ನನಗೆ ಈಗ ಓದಿ ಹೇಳಿದಂತೆ ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ ಅಲ್ಲಾ. ಸದ್ರಿ ಹೇಳಿಕೆಯನ್ನು ನಿಪಿ-11 ಎಂದು ಗುರುತಿಸಲಾಯಿತು.

ನಾನು, ನನ್ನ ಮಗಳು ಹಾಗೂ ನನ್ನ ಕುಟುಂಬದವರು ಆರೋಪಿಯೊಂದಿಗೆ ರಾಜೀ ಮಾಡಿಕೊಂಡು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲಾ.

<u>ಪಾಟೀ ಸವಾಲು:</u> ಆರೋಪಿ ಪರ ಶ್ರೀ ಎಂ ಡಿ ಎಸ್ ವಕೀಲರಿಂದ ಹಾಜರಿದ್ದು ಪಾಟೀ ಸವಾಲು ಇಲ್ಲಾ ಎಂದು ಹೇಳಿರುತ್ತಾರೆ.

<u>ಮರು ವಿಚಾರಣೆ:</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕುಂದಾಪುರ